ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ
**KARNATAKA LEGISLATIVE ASSEMBLY RESEARCH AND REFERENCE BRANCH**

ಪತ್ರಿಕಾ ತುಣುಕುಗಳು
**PAPER CLIPPINGS**

ಇಲಾಖೆ / ವಿಷಯ : DEPARTMENT / SUBJECT: ಕಲೆ

ಪತ್ರಿಕೆಯ ಹೆಸರು : NAME OF THE NEWS PAPER: ಉದಯವಾಣಿ ದಿನಾಂಕ : DATE : 16/12/2019

ಬಜೆಟ್ ಅಧಿವೇಶನ ವೇಳೆ ಅನಾವರಣ | ಮೋದಿಯಿಂದ ಛಾಯಾಚಿತ್ರ ಲೋಕಾರ್ಪಣೆ

# ಸಂಸತ್‌ಗೆ ಅನುಭವ ಮಂಟಪ ಮೆರುಗು

**• ಹಣಮಂತರಾವ ಭೈರಾಮಡಗಿ**

ಕಲಬುರಗಿ: ಹನ್ನೆರಡನೇ ಶತಮಾನದಲ್ಲಿ ವಿಶ್ವದಲ್ಲೇ ಮೊದಲ ಬಾರಿ ನಡೆದ ಬಸವಾದಿ ಶರಣರ ಅನುಭವ ಮಂಟಪದ ಕಲಾಕೃತಿ ಬಜೆಟ್ ಅಧಿವೇಶನ ಇಲ್ಲವೇ ಅದಕ್ಕೂ ಮುನ್ನ ಸಂಸತ್ ಭವನದಲ್ಲಿ ಅಳವಡಿಕೆಯಾಗಲಿದೆ. ಇದನ್ನು ಪ್ರಧಾನಿ ಮೋದಿ ಅವರು ಲೋಕಾರ್ಪಣೆ ಮಾಡಲಿದ್ದಾರೆ.

ಲೋಕಸಭಾಧ್ಯಕ್ಷ ಓಂ ಬಿರ್ಲಾ ಸಂಸತ್ ಆವರಣದೊಳಗೆ ಅನುಭವ ಮಂಟಪ ಕಲಾಕೃತಿ ಅಳವಡಿಕೆಗೆ ಅನುಮತಿ ನೀಡಿದ್ದು, ಸದ್ಯದಲ್ಲೇ ಅಳವಡಿಕೆಗೆ ದಿನಾಂಕ ಗೊತ್ತುಪಡಿಸುವುದಾಗಿ ತಿಳಿಸಿದ್ದಾರೆ. ನಾಡೋಜ ಪುರಸ್ಕೃತ, ರೂಪಧರ್ ಪ್ರಶಸ್ತಿ ವಿಜೇತ ಕಲಬುರಗಿಯ ಡಾ| ಜೆ.ಎಸ್. ಖಂಡೇರಾವ್ ಎರಡು ವರ್ಷಗಳಿಂದ ಈ ಕಲಾಕೃತಿ ರಚಿಸುತ್ತಿದ್ದಾರೆ.

12ನೇ ಶತಮಾನದಲ್ಲಿ ಬಸವಕಲ್ಯಾಣದಲ್ಲಿ ಅಲ್ಲಮ ಪ್ರಭು ಅಧ್ಯಕ್ಷತೆಯಲ್ಲಿ ನಡೆದ ಬಸವಾದಿ ಶರಣರ ಅಧಿವೇಶನ ಅಂದರೆ ಅನುಭವ ಮಂಟಪ ದೃಶ್ಯ ಕಣ್ಣೆದುರಿಗೆ ಬರುವ ರೀತಿಯಲ್ಲಿ ಕಲಾಕೃತಿ ರೂಪುಗೊಂಡಿದೆ. ವಿವಿಧ ಸಾಮಾಜಿಕ ಸ್ತರಗಳಿಂದ ಬಂದ ಕಾಯಕ ಜೀವಿ ಶರಣರ ಪ್ರತಿನಿಧಿಗಳಾದ 770 ಅಮರಗಣಂಗಳು ಅನುಭವ ಮಂಟಪದಲ್ಲಿ ಸೇರಿ ಜೀವನ ದರ್ಶನಕ್ಕೆ ಸಂಬಂಧಿಸಿದ ವಿಷಯಗಳ ಕುರಿತು ಚರ್ಚಿಸುತ್ತಿದ್ದ, ಶರಣ-ಶರಣೆಯರೆಲ್ಲರೂ ಪಾಲ್ಗೊಂಡ ಅಪರೂಪದ ದೃಶ್ಯವನ್ನು ಖಂಡೇರಾವ್ ಕಲಾಕುಂಚದಲ್ಲಿ ಸೆರೆ ಹಿಡಿದಿದ್ದಾರೆ.



ಅನುಭವ ಮಂಟಪದ ಬೃಹತ್ ಕಲಾಕೃತಿಗೆ ನಾಡೋಜ ಡಾ| ಜೆ.ಎಸ್. ಖಂಡೇರಾವ್ ಅಂತಿಮ ಸ್ಪರ್ಶ ನೀಡುತ್ತಿದ್ದಾರೆ.

**ಎರಡು ವರ್ಷ ಕಾಲ ರಚನೆ:** ಅನುಭವ ಮಂಟಪದ ಬೃಹದಾಕಾರದ ಕಲಾಕೃತಿ ರಚಿಸುವಂತೆ ಮೊದಲಿಗೆ ಹೇಳಿದ್ದು ಜ್ಞಾನಯೋಗಿ ವಿಜಯಪುರದ ಸಿದ್ದೇಶ್ವರ ಸ್ವಾಮೀಜಿ, ಮೌನಯೋಗಿ ಜಡೆಯ ಶಾಂತಲಿಂಗೇಶ್ವರ ಸ್ವಾಮೀಜಿ, ಭಾಲ್ಕಿ ಬಸವಲಿಂಗಪಟ್ಟದ್ದೇವರು. ತದನಂತರ ಮಾಜಿ ಸಂಸದ ಡಾ| ಬಸವರಾಜ ಪಾಟೀಲ ಸೇಡಂ, ಬಸವ ಸಮಿತಿ ಅರವಿಂದ ಜತ್ತಿ ಬೆಂಬಲಿಸಿದ್ದಾರೆ.

ಇದಕ್ಕೂ ಮುನ್ನ ಸಣ್ಣ ಆಕಾರದ ಅನುಭವ ಮಂಟಪದ ಕಲಾಕೃತಿಯನ್ನು 25 ವರ್ಷಗಳ ಹಿಂದೆ ಖಂಡೇರಾವ್ ರಚಿಸಿದ್ದಾರೆ. ▶ 6ನೇ ಪುಟಕ್ಕೆ

## ಬಸವಣ್ಣ ಪ್ರತಿಮೆ ನಂತರ ಈ ಕಲಾಕೃತಿ ಅನಾವರಣ

**2003, ಏ.28ರಂದು ನವದೆಹಲಿಯ ಸಂಸತ್ ಎದುರು ಅಶ್ವಾರೂಢ ಬಸವೇಶ್ವರ ಪ್ರತಿಮೆ ಅನಾವರಣಗೊಂಡಿತ್ತು. ಈಗ ಸಂಸತ್ತಿನೊಳಗೆ ಬಸವಣ್ಣನವರ ಅನುಭವ ಮಂಟಪ ಅಂದರೆ ಜಾಗತಿಕ ಮೊದಲ ಸಂಸತ್‌ನ ಕಲಾಕೃತಿ ಪ್ರತಿಷ್ಠಾಪನೆ ಆಗುತ್ತಿದೆ. ಸಂಸತ್‌ನಲ್ಲಿ ಅನುಭವ ಮಂಟಪ ಕುರಿತಾಗಿ ಅನಾವರಣಗೊಳ್ಳುತ್ತಿರುವ ಮೊದಲ ಕಲಾಕೃತಿ ಇದಾಗಿದೆ.**

# ಸಂಸತ್‌ಗೆ ಅನುಭವ ಮಂಟಪ ಮೆರುಗು

**1ನೇ ಪುಟದಿಂದ ▶** ಈಗ 7.9 ಅಡಿ ಅಳತೆಯ ಕಲಾಕೃತಿಯನ್ನು ಕಳೆದ ಎರಡು ವರ್ಷಗಳಿಂದ ರಚಿಸುತ್ತಿದ್ದಾರೆ. ಈ ಕಲಾಕೃತಿ ನಾಡೋಜ ಡಾ| ಜೆ.ಎಸ್. ಖಂಡೇರಾವ್ ಪ್ರತಿಷ್ಠಾನದ ಕಾಪಿರೈಟ್‌ಗೆ ಒಳಪಟ್ಟಿದೆ.

**ಯಾರು ಈ ಖಂಡೇರಾವ್?** ಚಿತ್ರಕಲೆಯಲ್ಲಿನ ಅಮೋಘ ಸೇವೆಗೆ ಈಗಾಗಲೇ ಡಾ| ಜೆ.ಎಸ್. ಖಂಡೇರಾವ್ ಅವರಿಗೆ ಚಿತ್ರಕಲಾ ಕ್ಷೇತ್ರದ ಅತ್ಯುನ್ನತ ರೂಪಧರ್ ಪ್ರಶಸ್ತಿ ಅಲ್ಲದೇ ಹಂಪಿ ಕನ್ನಡ ವಿವಿಯ ನಾಡೋಜ, ಕರ್ನಾಟಕ ಕೇಂದ್ರೀಯ ವಿವಿ ಹಾಗೂ ಗುಲ್ಬರ್ಗ ವಿವಿ ಗೌರವ ಡಾಕ್ಟರೇಟ್ ಹಾಗೂ ಹತ್ತಾರು ಶ್ರೇಷ್ಠ ಪ್ರಶಸ್ತಿಗಳು ದೊರಕಿವೆ. ನೂರಾರು ಚಿತ್ರಕಲಾ ಪ್ರದರ್ಶನ ಕಂಡಿವೆ. ಸಾವಿರಾರು ಕಲಾಕೃತಿಗಳು ರಚನೆಯಾಗಿವೆ. ಕರ್ನಾಟಕ ಲಲಿತ ಕಲಾ ಅಕಾಡೆಮಿ ಅಧ್ಯಕ್ಷರಾಗಿಯೂ ಡಾ| ಖಂಡೇರಾವ್ ಸೇವೆ ಸಲ್ಲಿಸಿದ್ದಾರೆ.

> **ನವದೆಹಲಿ ಸಂಸತ್ ಎದುರಿಗೆ ಬಸವಣ್ಣನವರ ಮೂರ್ತಿ ಅನಾವರಣ ಸಂದರ್ಭದಲ್ಲೇ ಚಿಕ್ಕದಾಗಿ ರಚಿಸಲಾಗಿದ್ದ ಅನುಭವ ಮಂಟಪದ ಚಿತ್ರಕಲಾಕೃತಿಯನ್ನು ಆಗಿನ ರಾಷ್ಟ್ರಪತಿ ಡಾ| ಎಪಿಜೆ ಅಬ್ದುಲ್ ಕಲಾಂ ವೀಕ್ಷಿಸಿ ಮೆಚ್ಚುಗೆ ವ್ಯಕ್ತಪಡಿಸಿದ್ದರು. ಈಗ ದೊಡ್ಡದಾಗಿ ರಚಿಸಲಾದ ಕಲಾಕೃತಿ ಅನಾವರಣಗೊಳ್ಳುತ್ತಿದೆ. ಅಪರೂಪ ಎನ್ನುವಂತೆ ರೂಪಿಸಲಾಗಿದೆ.**
>
> **• ಡಾ| ಜೆ.ಎಸ್. ಖಂಡೇರಾವ್, ನಾಡೋಜ**